- -                                   ಓ ಎಸ್ ನಂ.31/2021

ಪಿ.ಡಬ್ಲ್ಯೂ :1

ದಿನಾಂಕ :14-10-2024 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ

1 ನೇ ಪ್ರತಿವಾದಿಯ ಅಜ್ಜಿಯ ಹೆಸರು ನಂಜಮ್ಮ ಎಂದರೆ ಸರಿಯಲ್ಲ , ಆಕೆಯ ಹೆಸರು ಲಿಂಗಮ್ಮ . ನನಗೆ ಆಕೆಯ ಹೆಸರು ಗೊತ್ತಿಲ್ಲ, ಲಿಂಗಮ್ಮ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ -8 ವಂಶವೃಕ್ಷದಲ್ಲಿ ಸಿದ್ದರಾಮಣ್ಣ ರವರ ಹೆಣ್ಣು ಮಕ್ಕಳಾದ ಚಿಕ್ಕ ಈರಮ್ಮ , ಬಸಮ್ಮ , ಗಂಗಮ್ಮ ಮತ್ತು ನಂಜಮ್ಮ ರವರನ್ನು ತೋರಿಸಿಲ್ಲ ಎಂದರೆ ಸಾಕ್ಷಿಯು ಅವರುಗಳು ನನಗೆ ಗೊತ್ತಿಲ್ಲ ಎಂದು ಉತ್ತರಿಸಿದ್ದಾರೆ . ಸಿದ್ದರಾಮಯ್ಯ ರವರ ಮಕ್ಕಳ ಬಗ್ಗೆ ನನಗೆ ವಿವರಗಳು ತಿಳಿದಿಲ್ಲ ಎಂದರೆ ಹೆಣ್ಣುಮಕ್ಕಳ ಬಗ್ಗೆ ಗೊತ್ತಿಲ್ಲಎಂದು ಸಾಕ್ಷಿ ಹೇಳಿದ್ದಾರೆ . ಸಿದ್ದರಾಮಯ್ಯ ನವರು ಯಾವಾಗ ಮರಣ ಹೊಂದಿದ್ದಾರೆ ಎಂದು ಗೊತ್ತಿಲ್ಲ .

ದಾವಾ ಸ್ವತ್ತುಗಳು ಮೂಲತಃ ನನ್ನ ಮುತ್ತಾತ ಸಿದ್ದರಾಮಯ್ಯ ನವರಿಗೆ ಸೇರಿತ್ತು . ಅದನ್ನು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ವಂಶವೃಕ್ಷವನ್ನು ಹಾಜರುಪಡಿಸಿದ್ದೇನೆ ಎಂದು ತಿಳಿಸಿದ್ದಾರೆ . ಸಿದ್ದರಾಮಯ್ಯ ರವರಿಗೆ ಎಷ್ಟು ಸ್ವತ್ತುಗಳು ಇದ್ದವು ಎಂದರೆ ಸಾಕ್ಷಿಯು ಒಂದೇ ಚಕ್ಕುಬಂದಿಯಲ್ಲಿ 3 ಸ್ವತ್ತುಗಳು ಇದ್ದವು ಎಂದು ತಿಳಿಸಿದ್ದಾರೆ . ಸಿದ್ದರಾಮಯ್ಯ ರವರಿಗೆ ಹಲವು ಸ್ವತ್ತುಗಳು ಇದ್ದವು ಅವರು ತಮ್ಮ ಜೀವಿತಾವಧಿಯಲ್ಲಿಯೇ ತನ್ನ ಮಕ್ಕಳಿಗೆ ಸ್ವತ್ತುಗಳನ್ನು ವಿಭಾಗಿಸಿಕೊಟ್ಟಿದ್ದರು ಎಂದರೆ ಸರಿಯಲ್ಲ . ನಾನು ಸಿದ್ದರಾಮಯ್ಯ ರವರ ಜೀವಿತಾವಧಿಯಲ್ಲಿ ಜನಿಸಿರಲಿಲ್ಲ, ಆದುದರಿಂದ ಅವರ ಸ್ವತ್ತುಗಳ ಬಗ್ಗೆ ಮತ್ತು ವಿಭಾಗದ ಬಗ್ಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ . ದಾವಾ ಷೆಡ್ಯೂಲ್ 1 ಮತ್ತು 3 ರಿಂದ 6 ನೇ ಸ್ವತ್ತುಗಳು ಮೇಲೆ ಹೇಳಿದ ವಿಭಾಗದ ಪ್ರಕಾರ 1 ನೇ ಪ್ರತಿವಾದಿಯ ತಂದೆ ಲಿಂಗಣ್ಣ ರವರ ಭಾಗಕ್ಕೆ ಬಂದಿದ್ದವು ಎಂದರೆ ಸರಿಯಲ್ಲ. ಅದೇ ಪ್ರಕಾರ ಅವರು ತಮ್ಮ ಹೆಸರಿಗೆ ಆ ಸ್ವತ್ತುಗಳ ಖಾತೆ ಪಹಣಿ ಹೊಂದಿದ್ದರು ಎಂದರೆ ಸರಿಯಲ್ಲ . ಸದರಿ ಸ್ವತ್ತುಗಳಲ್ಲಿ ಅವರು ತಮ್ಮ ಪತ್ನಿ ಮತ್ತು ಮಕ್ಕಳೊಡನೆ ಸ್ವಾಧೀನ ಹೊಂದಿ ಅನುಭವಿಸುತ್ತಿದ್ದರು ಎಂದರೆ ಸರಿಯಲ್ಲ .

1 ನೇ ಪ್ರತಿವಾದಿಯ ತಂದೆ ಲಿಂಗಣ್ಣ ರವರಿಗೆ 6 ಜನ ಮಕ್ಕಳು ಎಂದರೆ ಸರಿ . ಲಿಂಗಣ್ಣ ರವರ ಮರಣಾ ನಂತರ ಅವರ 6 ಜನ ಮಕ್ಕಳು ಮೇಲೆ ಹೇಳಿದ ದಾವಾ ಷೆಡ್ಯೂಲ್ 1 ಮತ್ತು 3 ರಿಂದ 6 ನೇ ಸ್ವತ್ತುಗಳನ್ನು ವಿಭಾಗಿಸಿಕೊಂಡು ಪ್ರತ್ಯೇಕ ಖಾತೆ ಮಾಡಿಸಿಕೊಂಡು ಸ್ವಾಧೀನಾನುಭವ ಹೊಂದಿದ್ದಾರೆ ಎಂದರೆ ಸರಿಯಲ್ಲ .

ದಾವಾ ಷೆಡ್ಯೂಲ್ 2 ನೇ ಸ್ವತ್ತನ್ನು 1 ನೇಪ್ರತಿವಾದಿ ದಿಃ 24-03-1971 ರಂದು ಒದಲೂರಿನ ಲಿಂಗಪ್ಪ ರವರ ಮಗ ಶಿವಣ್ಣ ಎಂಬುವವರಿಂದ ಖರೀದಿಸಿದ್ದಾರೆ ಎಂದರೆ ಸರಿಯಲ್ಲ . ಸದರಿ ಕ್ರಯ ಪತ್ರದ ಆಧಾರದಲ್ಲಿ ಸದರಿ ಸ್ವತ್ತಿನ ಖಾತೆ 1 ನೇ ಪ್ರತಿವಾದಿಯ ಹೆಸರಿಗೆ ದಾಖಲಾಗಿದೆ ಎಂದರೆ ಸರಿಯಲ್ಲ . ದಾವಾ ಷೆಡ್ಯೂಲ್ 2 ನೇ ಸ್ವತ್ತನ್ನು 1 ನೇ ಪ್ರತಿವಾದಿಯು ಖರೀದಿಸಿದ್ದು ಅದು ಅವರ ಸ್ವಯಾರ್ಜಿತ ಸ್ವತ್ತಾಗಿದೆ , ನಮಗೆ ಯಾರಿಗೂ ಸಹಾ ಅದರ ಮೇಲೆ ಅಧಿಕಾರ ಹಕ್ಕು ಇಲ್ಲ ಎಂದರೆ ಸರಿಯಲ್ಲ . ಮೇಲೆ ಹೇಳಿದಂತೆ ಲಿಂಗಣ್ಣ ರವರ ಹೆಸರಿಗೆ ಮತ್ತು 1 ನೇ ಪ್ರತಿವಾದಿಯ ಹೆಸರಿಗೆ ದಾಖಲಾಗಿರುವ ಖಾತೆಗಳನ್ನು ಯಾವುದೇ ಪ್ರಾಧಿಕಾರದ ಮುಂದೆ ಪ್ರಶ್ನಿಸಿಲ್ಲ ಎಂದರೆ ಸರಿ .

ದಿಃ 09-11-2020 ರಂದು 1 ರಿಂದ 9 ನೇ ಪ್ರತಿವಾದಿಗಳು ದಾವಾ ಸ್ವತ್ತುಗಳನ್ನು ವಿಭಾಗ ಪತ್ರದ ಮೂಲಕ ವಿಭಾಗಿಸಿಕೊಂಡಿದ್ದಾರೆ ಎಂದರೆ ಸರಿಯಲ್ಲ . ಸದರಿ ವಿಭಾಗದ ಪ್ರಕಾರ ಕಂದಾಯ ಅಧಿಕಾರಿಗಳು ನಮೂನೆ -11(ಎ) ನಕ್ಷೆ ತಯಾರಿಸಿದ್ದಾರೆ ಎಂದರೆ ಸರಿಯಲ್ಲ . ವಾದಿಯ ತಂದೆ ಹುಚ್ಚಣ್ಣ ರವರು ತಮ್ಮ ಭಾಗಕ್ಕೆ ಬಂದಿದ್ದ ಸ್ವತ್ತುಗಳನ್ನು ಮಾರಾಟ ಮಾಡಿ ಅಮ್ಮನಘಟ್ಟ ಗ್ರಾಮಕ್ಕೆ ಮನೆ ಅಳಿಯನಾಗಿ ಹೋಗಿದ್ದಾರೆ ಎಂದರೆ ಸರಿಯಲ್ಲ . ಅಮ್ಮನಘಟ್ಟ ಗ್ರಾಮದಲ್ಲಿ ಅವರಿಗೆ ಸೇರಿದ ಸಾಕಷ್ಟು ಸ್ವತ್ತುಗಳು ಇದ್ದು ಹಲವು ದಶಕಗಳಿಂದಲೂ ಅಲ್ಲಿಯೇ ವಾಸಿಸುತ್ತಿದ್ದಾರೆ ಎಂದರೆ ಸರಿಯಲ್ಲ . ಬಹಳ ವರ್ಷಗಳ ಹಿಂದೆಯೇ ಸಿದ್ದರಾಮಯ್ಯ ರವರ ಕುಟುಂಬದವರು ಸ್ವತ್ತುಗಳನ್ನು ವಿಭಾಗಿಸಿಕೊಂಡಿರುವ ಕಾರಣ ಪ್ರಸ್ತುತ ನಾನು ಹೇಳುವಂತೆ ಒಟ್ಟು ಕುಟುಂಬ ಇರುವುದಿಲ್ಲ ಎಂದರೆ ಸರಿಯಲ್ಲ . ದಾವಾ ಷೆಡ್ಯೂಲ್ 1 ಮತ್ತು 3 ರಿಂದ 6 ನೇ ಸ್ವತ್ತುಗಳು 1 ನೇ ಪ್ರತಿವಾದಿಯ ತಂದೆಯ ಭಾಗಕ್ಕೆ ಬಂದ ಸ್ವತ್ತುಗಳಾಗಿದ್ದು ದಾವಾ ಷೆಡ್ಯೂಲ್ 2 ನೇ ಸ್ವತ್ತು 1 ನೇ ಪ್ರತಿವಾದಿಯ ಸ್ವಯಾರ್ಜಿತ ಸ್ವತ್ತಾಗಿದ್ದು ವಾದಿಗೆ ಅವುಗಳಲ್ಲಿ ಯಾವುದೇ ಭಾಗಾಂಶದ ಹಕ್ಕು ಇಲ್ಲ ಎಂದರೆ ಸರಿಯಲ್ಲ . ವಾದಿಗೆ 1 ನೇ ಪ್ರತಿವಾದಿಯ ಕುಟುಂಬದ ಸ್ವತ್ತುಗಳಲ್ಲಿ ಯಾವುದೇ ಭಾಗಾಂಶದ ಹಕ್ಕು ಇಲ್ಲ ಅದು ತಿಳಿದಿದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಿದ್ದರಾಮಯ್ಯ ರವರ ಕುಟುಂಬದ ಸದಸ್ಯರ ಬಗ್ಗೆ ಮತ್ತು ಅವರ ಸ್ವತ್ತುಗಳ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ ಎಂದರೆ

ಸರಿಯಲ್ಲ . ಪ್ರತಿವಾದಿಗಳಿಗೆ ತೊಂದರೆ ನೀಡುವ ಉದ್ದೇಶದಿಂದ ಸುಳ್ಳು ವಿವರಗಳ ವಂಶವೃಕ್ಷವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓದಿ ಹೇಳಿ, ಕೇಳಿದೆ, ಸರಿ ಇದೆ, ಎಂದರು.

SD/-
(ಅನುಪಮ.ಡಿ. )
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ, ಗುಬ್ಬಿ .